ನೋಟೀಸು ಮಾಡಿದ್ದಳು. ಹಾಗೆ ಬೇಸರದಲ್ಲಿ ಅವನನ್ನು ಕಳಿಸುವುದು ಅವಳಿಗೆ ಇಷ್ಟವಿರಲಿಲ್ಲ. ಅದಕ್ಕೆ ಇನ್ನೆರಡು ದಿನ ಉಳಿಸಿಕೊಂಡರೆ, ಹುಡುಗ ಹುಡುಗಿ ಜೊತೆಯಲ್ಲಿದ್ದು ಒಂದಿಷ್ಟು ಹಗುರಾಗಬಹುದು ಎಂದು ಯೋಚಿಸಿ ಲಿಂಗಣ್ಣ ಮತ್ತು ನೀಲವ್ವನ ಮನವೊಲಿಸಿ ಸುಮಿಯನ್ನು ತನ್ನ ಮನೆಯಲ್ಲೇ ಉಳಿಸಿಕೊಂಡಿದ್ದಳು. ಅಂತರ್ಮುಖಿಯಾಗುತ್ತಿರುವ ಮಗಳನ್ನು ನೋಡುವುದು ಲಿಂಗಣ್ಣನವರಿಗೆ ಹಿಂಸೆಯೆನಿಸಿ, ಅವಳಿಗೊಂದಿಷ್ಟು ಬದಲಾವಣೆ ಸಿಗಲಿ ಎಂದು ಸಹೋದರಿ ಶೈಲು ಜೊತೆ ಕಳಿಸಿದ್ದರು. ಲಿಂಗಣ್ಣ 'ಆಕಿ ಅಲ್ಲಿರುವುದು ಯಾರಿಗೂ ಗೊತ್ತಾಗದ ಹಂಗ ನೋಡ್ಕೋ' ಅಂದಿದ್ದ. 'ಬಾರೋ, ನಿಂಗೆ ನಮ್ಮ ಕಲಬುರಗಿ ತೋರಿಸ್ತೀವಿ' ಎಂದು ಕಾರ್ ಮಾಡಿ ಸುತ್ತಾಡಿಸಲು ಕರೆದೊಯ್ದಳು. ಹೋದಲೆಲ್ಲ ಸುಮಿ ಮತ್ತು ಪ್ರೀತಂಗೆ ಮುಂದೆ ಮಾಡಿ 'ನಿಮ್ಮೂರು ತೋರಿಸವ್ವ, ಕಡಲು ತೀರದ ಹುಡುಗನಿಗೆ' ಎಂದು ತಾನು ಹಿಂದೇ ಉಳಿಯುತ್ತಿದ್ದಳು. ಇಬ್ಬರೂ ಹೆಚ್ಚುಕಮ್ಮಿ ಮೌನವಾಗಿದ್ದರು. ಸುಮಿ ಇದ್ದಲ್ಲಿ ಎಂದೂ ಅಂಥ ಮೌನಕ್ಕೆ ಎಡೆಯೇ ಇರಲಿಲ್ಲ. ಅವಳಲ್ಲಿ ವಯಸ್ಸಿಗೆ ಮೀರಿದ ಪ್ರಬುದ್ಧತೆಯಿದ್ದರೂ ಸಕಾರಣವಾಗಿ ಚೆಲ್ಲುಚೆಲ್ಲು ವ್ಯಕ್ತಿತ್ವ ಧಾರಣೆ ಮಾಡಿಕೊಳ್ಳಬಲ್ಲಳು. ಪ್ರೀತಂನದು ಯಾವಾಗಲೂ ವಯಸ್ಸಿಗೆ ಮೀರಿದ ಗಾಂಭೀರ್ಯ. ಕಾಲೇಜಿನಲ್ಲಿ ಅವನ ಓರಗೆಯ ವಿದ್ಯಾರ್ಥಿಗಳು ಮಷ್ಕಿರಿ ಮಾಡುವುದು, ಮಳ್ಳು ಹರಿಯುವುದು ಅವನಿಗೆ ಲೈಕು ಆಗ್ತಿರಲಿಲ್ಲ. ಆದರೆ ಸುಮಿಯ ತುಂಟತನ ಅವನಿಗೆ ಇಷ್ಟವಾಗುತ್ತಿತ್ತು. ಸುಮಿ ಪ್ರೀತಂನ ಕಾಲೆಳೆಯುವುದು, ಸ್ವಲ್ಪ ಮೌನಿ ಬಾಬಾ ಆಗಿರುವ ಇವನ ಮೌನಕ್ಕೆ ಭಂಗ ತರುವಂತೆ ಆಡುವುದು, ನಗುವುದು, ರಮಿಸುವುದು, ಲೌಕಿಕ ಚಹರೆಯ ಜಗತ್ತನ್ನು ಅಲೌಕಿಕ ನೆಲೆಗೂ ಒಯ್ದು ಕನಫ್ಯೂಸ್ ಮಾಡುವುದು ಇತ್ಯಾದಿ ಹರಕತ್ತುಗಳಲ್ಲಿ ಎತ್ತಿದ ಕೈ ಅವಳದು. ಆದರೆ ಇಂದೇಕೋ ಅವಳೂ ಅವಳದೇ ಟಿಪಿಕಲ್ ಲವಲವಿಕೆಯ ಗೈರು ಹಾಜರಿಯಲ್ಲಿದ್ದಳು. ಬಹುಶಃ ಆ ಹುಡುಗಿಗೆ ಪ್ರಸ್ತುತ ಸನ್ನಿವೇಶದ ಭಾರವನ್ನು ಹೊರುವುದು ಸುಲಭವಾಗಿರಲಿಲ್ಲ. ಕಡಲಿನ ದಾಹವನ್ನು, ಮೋಹವನ್ನು ತಣಿಸುವಂಥ ಹುಡುಗ ಎದುರೇ ಇದ್ದರೂ, ಅವಳು ಬೇರೆಲ್ಲೋ ಇದ್ದಂತಿದ್ದಳು. ಅವಳ ಬಾಡಿದ ಮುಖದಲ್ಲೂ ಕಣ್ಣುಗಳು ಹೊಳಪನ್ನು ಸೂಸುತ್ತಿದ್ದವು. ಆದರೂ ಅಲ್ಲಿ ಚಿಕ್ಕ ಗದ್ಗದ ಭಾವವೋ ಅಥವಾ ಅಂಥದ್ದೇ ಏನೋ ವಿರಾಗವೋ ಕಾಣುತ್ತಿತ್ತು. ಅವಳು ಬೇರೇನನ್ನೋ ಯೋಚಿಸುತ್ತಿರುವಂತಿತ್ತು. ಪ್ರೀತಂನ ಹಾಲತ್ ಕೂಡ ಭಿನ್ನವಾಗಿರಲಿಲ್ಲ.

ಸುಮಿ ಕಾಲೇಜಿನಲ್ಲಿ ಓದಲು ಮತ್ತೆಂದೂ ಕಾರವಾರಕ್ಕೆ ಬರುವುದು ಸಾಧ್ಯವಿಲ್ಲ ಎಂಬುದು ಅವನಿಗೆ ಖಾತ್ರಿಯಾಗತೊಡಗಿತ್ತು. ಅವಳನ್ನು ಅಗಲಿರುವುದು ತನ್ನಿಂದ ಅಸಾಧ್ಯ ಎಂಬ ಕಹಿಸತ್ಯವನ್ನೂ ಅವನ ಮನಸ್ಸು ನುಡಿಯುತ್ತಿತ್ತು. ಸದ್ಯದ ಸ್ಥಿತಿಯಲ್ಲಿ ಭೌತಿಕ ದೂರ ಅನಿವಾರ್ಯವಾದರೆ, ಅದನ್ನು ಸಹ್ಯಗೊಳಿಸಿಕೊಳ್ಳಲು ತಮ್ಮ ಪ್ರೇಮಕ್ಕೆ ಮಾನಸಿಕ ನೆಮ್ಮದಿಯಾದನ್ನಾದರೂ ಅಪೇಕ್ಷಿಸುವುದರಲ್ಲಿ ತಪ್ಪೇನಿದೆ? ಸುಮಿ ಬಂದ ತರುವಾಯ ತನ್ನ ಲೈಫೇ ಬದಲಾಗಿಬಿಟ್ಟಿದೆ. ಸುಮಿಯಿಲ್ಲದಿದ್ದರೆ ತಾನು ಮೊದಲಿನ ಬದುಕಿಗೆ ಮರಳಲಾರೆ. ಪ್ರೇಮವೆಂಬುದು ಮನಸ್ಸನ್ನು ಸ್ಪರ್ಶಿಸುವ ತಿಳಿಗಾಳಿ ಎಂದು ಭಾಸವಾಗುತ್ತಿರುವಂತೆಯೇ, ಅದು ತೂಫಾನ್ ಆಗಿ ಅಪ್ಪಳಿಸಿತೆ? ಇದು ತಮ್ಮನ್ನು ಯಾವ ತೀರಕ್ಕೊಯ್ಯಲಿದೆ? ಇದನ್ನೆಲ್ಲ ಸುಮಿಯೆದುರು ಹೇಳಿಕೊಳ್ಳಬೇಕು... ಸುಮಿಯ ಮನಸ್ಸಿನಲ್ಲಿ ಏನಿರಬಹುದು? ಈ ಸಂದಿಗ್ಧದ ಸನ್ನಿವೇಶವನ್ನು ಹೇಗೆ ಎದುರಿಸುವಳು? ಪ್ರೇಮವನ್ನು ಅಲೌಕಿಕ ತೀರಕ್ಕೊಯ್ದು ರೋಮಾಂಚಿತಳಾಗುವ ಈ ಹುಡುಗಿ, ಲೌಕಿಕದಲ್ಲಿ ವಿರಹವನ್ನು ಹೇಗೆ ನಿಭಾಯಿಸುವಳು? ಶೈಲತ್ತೆಯಂತೆ ಪ್ರೇಮವನ್ನು ಅಮೂರ್ತಕ್ಕೊಯ್ದು ಅದನ್ನೇ ಸುಖಿಸುವ ಮನಸ್ಥಿತಿಗೆ ಜಾರಿಬಿಟ್ಟರೆ? ಅಂಥ ಯೋಚನೆಯಿಂದಲೇ ಪ್ರೀತಂನಿಗೆ ಒಂಟಿತನದ ಭಾವ ಬಂದುಬಿಟ್ಟಿತು, ಅದೂ ಸುಮಿಯ ಸಾನಿಧ್ಯದಲ್ಲೇ! ಈ ಕ್ಷಣದಲ್ಲಿ ಸಂಭವಿಸದ ಪ್ರೀತಿ, ಪ್ರೇಮ, ಬದುಕು ಪ್ರೀತಂನ ಗ್ರಹಿಕೆಗೆ ಅಷ್ಟಾಗಿ ನಿಲುಕುವುದಿಲ್ಲ. ವರ್ತಮಾನದ ಬದುಕಿಗೆ ಸ್ಪಂದಿಸುವ ಅವನು ಅದರಾಚೆಗೆ ನೀರಿನಿಂದ ಹೊರಬಂದ ಮೀನಿನಂತೆ ತಡಪಿಸುವ ಗಿರಾಕಿ.

'ಏನ್ ಗುರೂ ಗಂಭೀರವಾಗಿ ಯೋಚಿಸ್ತಿರೋದು, ನಿನ್ನದೇ ಗಾಳಕ್ಕೆ ನೀನೇ ಸಿಕ್ಕಾಕೊಂಡು ಪದ್ದಾಡ್ತಿರೋ ಹಾಗಿದೆ?' ಎಂದಳು. ಅವನು ಸುಮ್ಮನೇ ಇದ್ದ. 'ಈ ಸೀಕ್ವೆನ್ಸಿಗೆ, ನೀನೇ ಹಾಕಿದ ಗಾಳ ನಿನ್ನ ಮುಳ್ಳಾಗಿ ಕಚ್ಚಿತಲ್ಲೋ, ನೀನೇ ಬೀಸಿದ ಬಲೆ ನಿನ್ನ ಬಂಧಿ ಮಾಡಿತಲ್ಲೋ' ಅಂಥ ಸ್ಯಾಡ್ ಸಾಂಗ್ ಹಾಕ್ತಿದ್ರೆ ಚೆನ್ನಾಗಿರುತ್ತೈತಿ, ಅಲ್ವೇನೋ' ಎಂದಳು. ಅವನ ಮುಖದ ಬಿರುಸು ಸಡಿಲಾದವು!

'ಅಸಿಸ್ಟಂಟ್ ಡೈರೆಕ್ಟರಾಗಿ ಸೇರ್ಕೋ, ಬೆಂಗಳೂರಲ್ಲಿ ಜೊತೆಗೇ ಇರಬಹುದು' ಎಂದ.

'ನನ್ನ ಸರದಾರ ಕುದುರೆ ಮೇಲೆ ಬಂದು ನನ್ನನ್ನು ಮತ್ತೆ ಕಾರವಾರಕ್ಕೆ ಕರೆದೊಯ್ತಾನೆ ಅಂತ ತಿಳ್ಕಂಡಿದ್ದನಲ್ಲೋ. ಕಡಲು ತೀರದ ಸದಾಶಿವ ಕೋಟೆ ಬಳಿ ಇಬ್ಬರೂ ಬಿಂದಾಸಾಗಿ ರೊಮ್ಯಾನ್ಸ್ ಮಾಡುವ ಕನಸು ಚೂರುಚೂರಾಯ್ತಲ್ಲೋ, ಶಿವನೇ' ಎಂದು ನಾಟಕೀಯವಾಗಿ ತಲೆಗೆ ಕೈಯಿಟ್ಟಳು.

'ಕಾರವಾರ ನೂರಾರು ಮೈಲಿ ದೂರವಿದೆ. ಕಲಬುರ್ಗಿ ಕೋಟೆಯಲ್ಲೇ ನಿನ್ನ ರೊಮ್ಯಾನ್ಸ್ ಆಸೆ ತೀರಿಸಿಕೋಬಾರದೇ ಚಿನ್ನ' ಎಂದು ಪ್ರೀತಂನೂ ನಾಟಕೀಯವಾಗಿ ಹೇಳಿದ.

'ಮಕ್ಕಳಾ, ನೀವು ಸುತ್ತಾಡಿ ಬನ್ನಿ, ನಾನಿಲ್ಲೇ ಗೇಟಲ್ಲಿ ಕುಂದಿರ್ತೀನಿ' ಎಂದು ಶೈಲತ್ತೆ ಹಿಂದಿಂದ ಕೂಗಿದಾಗಲೇ ತಾವು ದರ್ಗಾದೊಳಗೆ ಪ್ರವೇಶ ಮಾಡಿದ್ದೇವಿ ಎಂಬ ಅರಿವಾದದ್ದು ಅವರಿಗೆ. ಪ್ರೇಮಿಗಳಿಗೆ ಆಪ್ತ ಕ್ಷಣಗಳಿಗೆ ಅವಕಾಶವಾಗಲಿ ಎಂಬ ಆಶಯದ ಜೊತೆಗೆ ಹುಸೇನಿ ಜೊತೆ ಅಲ್ಲೆಲ್ಲ ಅಲೆದಾಡಿದ ನೆನಪುಗಳು ಮರುಕಳಿಸುವ ಸಾಧ್ಯತೆ ಶೈಲತ್ತೆ ಹೆಬ್ಬಾಗಿಲಿನಲ್ಲೇ ಉಳಿಯಲು ಕಾರಣವಾಗಿತ್ತು.

ಖ್ವಾಜಾ ಬಂದೇನವಾಜ್ ದರ್ಗಾಕ್ಕೆ ಪ್ರೀತಂ ಬಂದಿದ್ದು ಮೊದಲ ಬಾರಿಗೆ ಆಗಿದ್ದರೂ, ಆ ಸ್ಮಾರಕದ ಬಗ್ಗೆ ಸುಮಿ ಅದೆಷ್ಟು ವರ್ಣಿಸಿದ್ದಳೆಂದರೆ, ಪರಿಚಿತ ಜಾಗಕ್ಕೆ ಬಂದಂತೆ ಅನಿಸತೊಡಗಿತ್ತು. ಅವಳ ವಿವರಣೆಯಲ್ಲಿ ಸೂಫಿ ಸಂತನ ಹೃದಯ ಇನ್ನೂ ಅಲ್ಲಿ ಕಂಪಿಸುತ್ತಿದೆ ಅನಿಸುತ್ತಿತ್ತು. ಪಕ್ಕದಲ್ಲಿ ಬಂದೇನವಾಜ್ ಸಂತನ ಮಗಳ ಗೋರಿಯಲ್ಲಿ ನಿಂತಿದ್ದ ಬೇವಿನ ಮರವು ಮನಸಿನ ದುಃಖಗಳನ್ನು ಹೀರಿಕೊಂಡು ಮನಸ್ಸನ್ನು ತಾಜಾಗೊಳಿಸುತ್ತದೆ ಎಂದಳು. ಸುಮಿ ಅಲ್ಲಿಂದ ಕೋಟೆ, ಅದರೊಳಗಿರುವ ಜಮಾ ಮಸೀದಿ ಎಲ್ಲವನ್ನೂ ಸುತ್ತು ಹಾಕಿಸಿದಳು. ಇಬ್ಬರೂ ಕಾರವಾರದ ಸದಾಶಿವಗಡದಲ್ಲಿರುವ ಚಿಕ್ಕ ಕೋಟೆ ಸ್ಥಳವನ್ನು ಸುತ್ತಿದ್ದ ನೆನಪು ಮಾಡಿಕೊಂಡರು. ಪ್ರೀತಂ ಸಂಬಂಧಿಕರ ಮನೆ ಬೆಟ್ಟುಳಿಗೆ ಹೋದ ಸಮಯದಲ್ಲಿ ಮಿರ್ಜಾನ್ ಕೋಟೆಯನ್ನೇನೋ ನೋಡಿದ್ದ. 'ಇಷ್ಟು ದೊಡ್ಡ ಕೋಟೆ ಹತ್ತಿದ್ದು ಫಸ್ಟ್ ಟೈಮು' ಅಂದ. ಸುಮಿ ಭಾರತೀಯ ಮತ್ತು ಪರ್ಶಿಯಾ ಶೈಲಿಗಳಲ್ಲಿದ್ದ ರಚನೆಗಳ ಅದ್ಭುತ ವಿವರಣೆ ನೀಡಿದಳು. ಐತಿಹಾಸಿಕ ಮತ್ತು ಚಾರಿತ್ರಿಕ ಸಂಗತಿಗಳನ್ನು ಪ್ರಸ್ತುತ ಕಾಲದಲ್ಲಿಟ್ಟು ನೋಡುವ ಅವಳ ಒಳನೋಟಗಳು ಅವನನ್ನು ದಂಗುಬಡಿಸಿದವು. ಅವಳ ವಿಷಯ ಗ್ರಹಿಕೆ, ಶಿಸ್ತಿನ ನಿರೂಪಣಾ ಕ್ರಮ ಅವನಲ್ಲಿ ಅಭಿಮಾನ ಮೂಡಿಸಿದವು. ಒಂದು ಕ್ಷಣ ಅವನಿಗೆ ತಮ್ಮ ಪ್ರೇಮವು ಸುಮಿಯ ಪ್ರತಿಭೆ ಸಮರ್ಪಕವಾಗಿ ಅರಳುವಲ್ಲಿ ತೊಡಕಾಗಬಹುದೇ ಎಂಬ ವಿಚಾರ ಹಾದುಹೋಯಿತು. ಕೋಟೆಯಿಂದ ಸಾತ್ ಗುಂಬಜ್ ಬರುವವರೆಗೂ ಅದನ್ನೇ ಯೋಚಿಸುತ್ತಿದ್ದ.

'ಹೇ ಸುಮಿ, ಈ ಪ್ರೀತಿ ಪ್ರೇಮಕ್ಕಿಂಥ ಘನವಾದದ್ದನ್ನು ನೀನು ಸಾಧಿಸುವುದಿದೆ ಎಂದು ನನಗೆ ಅನಿಸ್ತಿದೆ' ಅಂದ. ಅವಳು ಅವನ ಕೈಗಳನ್ನು ಹಿಡಿದು 'ಕೋತಿ, ನನ್ನ ಕನಸುಗಳೇ ಬೇರೆ ಇವೆ ನಿಜ. ಆದರೆ ಅದನ್ನು ಪ್ರೇಮದ ಸಾತ್ ಸಾತ್ ಸಾಧಿಸಬಲ್ಲೆ' ಎಂದಳು. ಅವಳ ಕಣ್ಣುಗಳಲ್ಲಿ ಚಿಕ್ಕ ಆರ್ದ್ರಭಾವ ಬಂದು ಬಿಡ್ತು. ಅದನ್ನು ಅರಿತವನಂತೆ ಪ್ರೀತಂ ಸಾತ್ ಗುಂಬಜ್ ಪ್ರಾಂಗಣವನ್ನು ಸುತ್ತುವಾಗ ಅವಳ ಕೈಗಳನ್ನು ಇನ್ನಷ್ಟು ಬಿಗಿಗೊಳಿಸಿಕೊಂಡ. ಅವಳೂ ಸಂದರ್ಭವನ್ನು ಹಗುರಗೊಳಿಸಲು 'ಸಾಧನೆಗೆ ಪ್ರೇಮವೂ ಟಾನಿಕ್ ಆಗಬಹುದು ಗುರು' ಎಂದು ಕಣ್ಣು ಮಿಟುಕಿಸಿದಳು.

ಸಾತ್ ಗುಂಬಜ್ ಕಟ್ಟಡಗಳ ವಿನ್ಯಾಸ ವಿಶಿಷ್ಟವಾಗಿತ್ತು. ಅಲ್ಲಿಯ ಪ್ರಶಾಂತ ಮೌನ, ಸುತ್ತ ತಂಪೆರೆಯುವ ಗಾರ್ಡನ್ನುಗಳು ಏಕಾಂತವನ್ನು ನಿರ್ಮಿಸಿದ್ದವು. ಜೊತೆಯಾಗಿ ನಡೆಯುತ್ತಿದ್ದವಳು ಒಂದು ಮರದ ನೆರಳಿಗೆ ಬಂದಾಗ ನಿಧಾನಿಸಿ ಅವನನ್ನು ಅಪ್ಪಿಕೊಂಡಳು. ಅವನ ಶರ್ಟಿನ ಮೇಲಿನೆರಡು ಗುಂಡಿಗಳು ಬಿಚ್ಚಿದ್ದರಿಂದ ಅಲ್ಲಿ ನವಿರಾಗಿ ಬೆರಳಾಡಿಸಿದಳು. ಕೊರಳಿಗೆ ಕೈ ಬಳಸಿ ಮುಖವನ್ನು ಎದೆಗೊತ್ತಿದಳು. ಪ್ರೀತಂನಿಂದ ಯಾವ ಪ್ರತಿಕ್ರಿಯೆ ಇಲ್ಲದಿದ್ದರೂ ಸ್ವಯಂ